ಉ. ಸಂದರ್ಭದೊಡನೆ ವಿವರಿಸಿರಿ.

1. ಜ್ಯೋತಿಯೇ ಆಗು ಜಗಕೆಲ್ಲ

ಉ. ಆಯ್ಕೆ : ಈ ಸಾಲನ್ನು ಹಲಸಂಗಿ ಗೆಳೆಯರು ಸಂಪಾದಿಸಿದ 'ಗರತಿಯ ಹಾಡು' ಸಂಕಲನದ 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ತ್ರಿಪದಿಗಳಿಂದ ಆರಿಸಲಾಗಿದೆ.

ಸಂದರ್ಭ : ತಾಯಿ ತನ್ನ ಮಗು ಒಳ್ಳೆಯವನಾಗಬೇಕೆಂದು ಹೇಳುವ ಮಾತುಗಳು ಇಲ್ಲಿ ಇವೆ. ಆಚಾರ-ವಿಚಾರಗಳಲ್ಲಿ ನಡೆ-ನುಡಿಗಳಲ್ಲಿ ತನ್ನ ಮಗ ಆದರ್ಶ ಪ್ರಾಯನಾಗಿರಬೇಕೆಂದು ಆಕೆ ಬಯಸುತ್ತಾಳೆ. ಮಾತಿನಲ್ಲಿ ಹಿತ-ಮಿತವಿರುವವನಾಗಿ ಜಗತ್ತಿಗೆ ದಾರಿದೀಪವಾಗಬೇಕೆಂದು ತಾಯಿ ಬಯಸುತ್ತಾಳೆ.

ಸ್ವಾರಸ್ಯ : ತನ್ನ ಮಗುವಿನ ಕುರಿತ ತಾಯಿಯ ಹಾರೈಕೆ ಇಲ್ಲಿ ವ್ಯಕ್ತವಾಗಿದೆ.

2. "ಬಂಗಾರ ನಿನಗೆ ಸ್ಥಿರವಲ್ಲ"

ಉ. ಆಯ್ಕೆ : ಈ ಸಾಲನ್ನು ಹಲಸಂಗಿ ಗೆಳೆಯರು ಸಂಪಾದಿಸಿದ 'ಗರತಿಯ ಹಾಡು' ಸಂಕಲನದ 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ತ್ರಿಪದಿಗಳಿಂದ ಆರಿಸಲಾಗಿದೆ.

ಸಂದರ್ಭ : ಶ್ರೀಮಂತಿಕೆ ಇದ್ದಾಗ ಒಡವೆ-ಆಭರಣಗಳನ್ನು ತೊಟ್ಟು ಮೆರೆಯಬಾರದು. ಸಿರಿತನವು ಶಾಶ್ವತವಲ್ಲ. ಮಧ್ಯಾಹ್ನದ ಬಿಸಿಲು ಹೊರಳಿ ಸಂಜೆಯಾಗುವಂತೆ ಶ್ರೀಮಂತಿಕೆ ಹೋಗಿ ಬಡತನ ಬರಬಹುದು ಎಂದು ಜನಪದರು ಎಚ್ಚರಿಸುತ್ತಾರೆ.

ಸ್ವಾರಸ್ಯ: ಬಡತನ-ಸಿರಿತನಗಳು ಶಾಶ್ವತವಲ್ಲ ಎಂಬ ಎಚ್ಚರಿಕೆ ಇಲ್ಲಿದೆ.

3. ಇಟ್ಟು ಹಂಗಿಸಬೇಡ

ಉ. ಆಯ್ಕೆ : ಈ ಸಾಲನ್ನು ಹಲಸಂಗಿ ಗೆಳೆಯರು ಸಂಪಾದಿಸಿದ 'ಗರತಿಯ ಹಾಡು' ಸಂಕಲನದ 'ಜ್ಯೋತಿಯೇ ಆಗು ಜಗಕೆಲ್ಲ' ಎಂಬ ತ್ರಿಪದಿಗಳಿಂದ ಆರಿಸಲಾಗಿದೆ.

ಸಂದರ್ಭ : ಮತ್ತೊಬ್ಬರಿಗೆ ಕೊಟ್ಟ ವಸ್ತುವಿನ ಕುರಿತು ಮರುಗಬಾರದು ಕೂಡಿಟ್ಟುಕೊಂಡು ಪರರನ್ನು ಹಂಗಿಸಬಾರದು. ಉಣ್ಣಲು ನೀಡಿ ಎಷ್ಟೆಲ್ಲಾ ತಿಂದರೆಂದು ಆಡಿಕೊಳ್ಳಬಾರದು ಎಂದು ಜನಪದರು ಹೇಳುತ್ತಾರೆ.

ಸ್ವಾರಸ್ಯ : ಜನರ ನಡವಳಿಕೆಯ ಕುರಿತ ವಿಡಂಬನೆ ಈ ಮಾತಿನಲ್ಲಿದೆ.

Scanned with CamScanner

III. ಭಾಷಾಭ್ಯಾಸ

ಅ. ಕೆಳಗಿನ ಪದಗಳಿಗೆ ಸಮಾನಾರ್ಥಕಗಳನ್ನು ಬರೆಯಿರಿ.

ಅರಸ = ರಾಜ ಕಂದ = ಮಗು

ಹಂಗಿಸು = ಕೀಳಾಗಿ ಮಾತಾಡು ಬಂಗಾರ = ಚಿನ್ನ

ಅಡವಿ = ಕಾಡು ಸಾಗರ = ಸಮುದ್ರ

ಆ. ಕೆಳಗಿನ ಪದಗಳಿಗೆ ಗ್ರಾಂಥಿಕ ರೂಪ ಬರೆಯಿರಿ.

ಬೈಬೇಡ = ಬಯ್ಯಬೇಡ ಹೊರಳೋದು = ಹೊರಳುವುದು

ಸಾಂರಾಜ್ಯ = ಸಾಮ್ರಾಜ್ಯ ನಮಗ = ನಮಗೆ

ಇ. ಕೆಳಗಿನ ಪದಗಳನ್ನು ಸ್ವಂತ ವಾಕ್ಯದಲ್ಲಿ ಬರೆಯಿರಿ.

ಚೂಡಾಮಣಿ : ಲಂಕೆಯಲ್ಲಿದ್ದ ಸೀತೆಯು ರಾಮನಿಗೆ ಹನುಮಂತನ ಮೂಲಕ ಚೂಡಾಮಣಿಯನ್ನು ಕಳುಹಿಸಿದಳು.

ಹಂಗಿಸು : ಇತರರನ್ನು ನಾವು ಮಾತಿನಲ್ಲಿ ಹಂಗಿಸಬಾರದು.

ನೆಂಟರು : ಊರೆಲ್ಲ ನೆಂಟರು ನಮ್ಮ ಬಳಿ ಗಂಟು ಇದ್ದಾಗ

ಸ್ಥಿರ : ಬಡತನ ಸಿರಿತನಗಳು ಸ್ಥಿರವಾದವುಗಳಲ್ಲ

ಈ. ಕೆಳಗಿನ ಪದಗಳಿಗೆ ವಿರುದ್ಧಾರ್ಥಕಗಳನ್ನು ಬರೆಯಿರಿ.

ಪ್ರಭು × ಆಳು

ಸ್ಥಿರ × ಅಸ್ಥಿರ

ನೀತಿ × ಅನೀತಿ

ಆಚಾರ × ದುರಾಚಾರ

ಬಡವ × ಶ್ರೀಮಂತ

ಉ. ಕೆಳಗಿನ ಪದಗಳನ್ನು ಮಾದರಿಯಂತೆ ಬಿಡಿಸಿ ಬರೆಯಿರಿ.

ಮಾದರಿ : ಹಡೆದ + ಅವ್ವ = ಹಡೆದವ್ವ

ಉ. ಜಗಕೆಲ್ಲ = ಜಗಕೆ + ಎಲ್ಲ

ಸಂಸಾರವೆಂಬುದು = ಸಂಸಾರ + ಎಂಬುದು

ಎದೆಯುದ್ದ = ಎದೆ + ಉದ್ದ

ಎಷ್ಟುಂಡರೆಂದು = ಎಷ್ಟು + ಉಂಡರೆಂದು

ಮಕ್ಕಳಿದ್ದರೆ = ಮಕ್ಕಳು + ಇದ್ದರೆ

ಒಡಹುಟ್ಟಿದಣ್ಣ = ಒಡಹುಟ್ಟಿದ + ಅಣ್ಣ

Scanned with CamScanner